ಬಚಾವಾಗುವ ಕ್ರಮಗಳು ಹೇಗಿರಬೇಕು ಎಂಬುದು ಸುತ್ತಲೂ ವಾಸಿಸುವ ನಾಗರಿಕರಿಗೆ ಗೊತ್ತಿರಬೇಕು. ನಾಗರಿಕರಿಗೆ ಅಷ್ಟೇ ಅಲ್ಲ, ಪಂಚಾಯಿತಿಗೆ, ಪೊಲೀಸರಿಗೆ, ಜಿಲ್ಲಾಧಿಕಾರಿಗೆ, ವೈದ್ಯಾಧಿಕಾರಿಗಳಿಗೆ ಅದು ಲಭ್ಯ ಇರಬೇಕು. ಅದು ವಿಷ ಉತ್ಪಾದನೆಯ ಕಾರ್ಖಾನೆಯೇ ಆಗಿದ್ದರೆ ಅಲ್ಲಿಂದ ಆಕಸ್ಮಿಕವಾಗಿ ಹೊರಸೂಸುವ ವಿಷಕ್ಕೆ ಸಮೀಪದ ಆಸ್ಪತ್ರೆಗಳಲ್ಲಿ ಪ್ರತಿವಿಷಗಳು ಸಿಗುವಂತಿರಬೇಕು. ಅಲ್ಲಿ ಅಗ್ನಿ ಅವಘಡ ಆಗುವ ಸಂಭವ ಇದ್ದರೆ ಅದಕ್ಕೆ ಸಿದ್ಧತೆಗಳು ಅಲ್ಲಿ ಸದಾ ಜಾಗೃತ ಸ್ಥಿತಿಯಲ್ಲಿರಬೇಕು.

ಉದಾಹರಣೆಗೆ ವಿಷಾನಿಲ ಹೊರಸೂಸಿದ ಸಂದರ್ಭದಲ್ಲಿ ಅಲ್ಲಿನ ನಿವಾಸಿಗಳಿಗೆ ಕೆಲವು ಪ್ರಾಥಮಿಕ ಜ್ಞಾನ ಇರಬೇಕಿತ್ತು. ವಿಷಗಾಳಿ ಪಸರಿಸಿದರೆ ಕೆಮ್ಮುತ್ತ ಓಡಬೇಡಿ. ಓಡಿದಷ್ಟೂ ಶ್ವಾಸಕ್ಕೆ ಜಾಸ್ತಿ ವಿಷ ಹೋಗುತ್ತಿರುತ್ತದೆ. ಸಾಧ್ಯವಿದ್ದರೆ ನೆಲಕ್ಕೆ ಹತ್ತಿರವಾಗಿ ಸೇರಿಕೊಳ್ಳಿ, ಅವಕಾಶವಿದ್ದರೆ ನೆಲಮಾಳಿಗೆಯನ್ನು ಸೇರಿಕೊಳ್ಳಿ. ಏಕೆಂದರೆ ನೆಲಕ್ಕೆ ಸಮೀಪ ಇದ್ದಷ್ಟೂ ಗಾಳಿಯಲ್ಲಿ ವಿಷದ ಸಾಂದ್ರತೆ ಕಡಿಮೆ ಇರುತ್ತದೆ ಎಂಬುದು ಗೊತ್ತಿರಬೇಕಿತ್ತು. ಬೇರೆ ದೇಶಗಳಲ್ಲಿ ಇಂಥ ಫ್ಯಾಕ್ಟರಿಗಳ ಸುತ್ತಲೂ ಕೆಲವು ವರ್ಷಗಳಿಗೊಮ್ಮೊಮ್ಮೆ ಅಪಾಯದ ಸೈರನ್ ಬಾರಿಸಿ, ಅಣಕು ತಾಲೀಮು ನಡೆಸುತ್ತಾರೆ. ತುರ್ತುಸ್ಥಿತಿಯಲ್ಲಿ ಹೇಗೆ ವರ್ತಿಸಬೇಕು ಎಂಬುದನ್ನು ಕೇವಲ ನಾಗರಿಕರಿಗೆ ಅಷ್ಟೇ ಅಲ್ಲ, ಆಂಬುಲೆನ್ಸ್, ಅಗ್ನಿಶಾಮಕ, ಪೊಲೀಸ್ ದಳಕ್ಕೂ ತರಬೇತಿ ಕೊಡುತ್ತಿರುತ್ತಾರೆ. ಶಾಲಾ ಮಕ್ಕಳ ಪಾಠದಲ್ಲಿ ಆ ಫ್ಯಾಕ್ಟರಿಯ ಕುರಿತು ವಿಶೇಷ ಪಾಠಗಳೋ ಪ್ರಾತ್ಯಕ್ಷಿಕೆಗಳೋ ಇರುತ್ತವೆ.

ನಮ್ಮಲ್ಲಿ ಅಂಥ ಯಾವ ವ್ಯವಸ್ಥೆಯೂ ಇಲ್ಲ. ಚೆರ್ನೊಬಿಲ್, ಫುಕುಶಿಮಾ ಪರಮಾಣು ದುರಂತಗಳ ನಂತರ ನಮ್ಮಲ್ಲೂ ಅಂಥ ಸ್ಥಾವರದ ಸುತ್ತ ಅಪರೂಪಕ್ಕೆ ಹೀಗೆ ಅಣಕು ಅವಘಡಗಳನ್ನು ಸೃಷ್ಟಿಸಿ ಬಚಾವಾಗುವ ವಿಧಾನಗಳ ತರಬೇತಿ ಕೊಡುವ ಕೆಲಸ ನಡೆಯುತ್ತದೆ. ತುರ್ತಾಗಿ ಊರನ್ನು ಖಾಲಿ ಮಾಡಬೇಕಾದರೆ ನಿವಾಸಿಗಳು ಏನೇನು ಮಾಡಬೇಕು, ಮಾಡಬಾರದು ಎಂಬುದರ ಅಭ್ಯಾಸ ನಡೆಯುತ್ತಿರುತ್ತದೆ. ಆದರೆ ಊರ ಮಧ್ಯೆಯೇ ಇರುವ ಸ್ಥಾವರಗಳಲ್ಲಿ ಅಂತಹ ತಾಲೀಮು ನಡೆದ ಉದಾಹರಣೆಗಳು ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪ.

ಎಲ್ಲಕ್ಕಿಂತ ಮುಖ್ಯ ಸಂಗತಿ ಏನೆಂದರೆ, ಊರ ಮಧ್ಯೆ ಏಕೆ ದೊಡ್ಡ ದೊಡ್ಡ ಕೆಮಿಕಲ್ ಫ್ಯಾಕ್ಟರಿ ಇರಬೇಕು? ಭೋಪಾಲ ದುರಂತದಿಂದ ಪಾಠ ಕಲಿತಿಲ್ಲವೆ ನಾವು? ಕೇಳಿದರೆ, ಫ್ಯಾಕ್ಟರಿ ಆರಂಭಿಸುವಾಗ ಸುತ್ತಲೂ ಜನವಸತಿ ಇರಲಿಲ್ಲ; ಆಮೇಲೆ ನಿಧಾನವಾಗಿ ಊರು ಬೆಳೆಯಿತು ಎಂಬ ವಿವರಣೆ ಸಿಗುತ್ತದೆ. ಅದು ನುಣುಚಿಕೊಳ್ಳುವ ನೆಪವಷ್ಟೆ. ಈ ಸ್ಥಾವರದ ಚರಿತ್ರೆಯನ್ನು ನೋಡಿದವರಿಗೆ ಅದು ಗೊತ್ತಾಗುತ್ತದೆ. ಸ್ಟೈರೀನ್ ದುರಂತ ಸಂಭವಿಸಿದ ಆರ್.ಆರ್. ವೆಂಕಟಪುರಂ ಬಡಾವಣೆ ಈ ಕಾರ್ಖಾನೆಯಿಂದ ಕೇವಲ 500 ಮೀಟರ್ ದೂರದಲ್ಲಿದೆ. ಸುತ್ತಮುತ್ತ ಇನ್ನೂ ಐದು ಬಡಾವಣೆಗಳು ಬೆಳೆದಿವೆ. ಅಲ್ಲಿ ಬಡಾವಣೆ ನಿರ್ಮಾಣಕ್ಕೆ ನಕ್ಷೆ ಬರೆದವರನ್ನು, ಸೈಟುಗಳನ್ನು ಹಂಚಿದವರನ್ನು ಶಿಕ್ಷಿಸಬೇಕಲ್ಲವೆ?

1961ರಲ್ಲಿ 'ಹಿಂದೂಸ್ತಾನ್ ಪಾಲಿಮರ್ಸ್' ಹೆಸರಿನ ಕಂಪನಿ ಅಲ್ಲಿನ 270 ಎಕರೆ ಸ್ಥಳದಲ್ಲಿ ಕಾರ್ಖಾನೆಯನ್ನು ಸ್ಥಾಪಿಸಿತ್ತು. 1978ರಲ್ಲಿ ವಿಟ್ಠಲ ಮಲ್ಯ ಮಾಲಿಕತ್ವದ ಮೆಕ್‌ಡೊವೆಲ್ ಕಂಪನಿ ಅದನ್ನು ಖರೀದಿಸಿತು. 1997ರಲ್ಲಿ ಅದು ದಕ್ಷಿಣ ಕೊರಿಯಾ ಮೂಲದ 'ಎಲ್‌ಜಿ ಕಂಪನಿ'ಗೆ ಹಸ್ತಾಂತರಗೊಂಡು ಹೊಸ ಹೆಸರಿನಲ್ಲಿ ಲೈಸೆನ್ಸ್ ಪಡೆದು, ಕಾರ್ಖಾನೆಯನ್ನು ನವೀಕರಿಸಿತು. ಆ ಹೊತ್ತಿಗಾಗಲೇ ಅಲ್ಲಿ ಸುತ್ತಮುತ್ತಲೂ ಬಡಾವಣೆ ಬೆಳೆದಿತ್ತು. ಇದು ಸ್ಟೈರಿನ್ ಎಂಬ ಅಪಾಯಕಾರಿ ರಾಸಾಯನಿಕ ದ್ರವ್ಯವನ್ನು ಉತ್ಪಾದಿಸುವ ಫ್ಯಾಕ್ಟರಿ ಆಗಿದ್ದರಿಂದ ಮಾಲಿನ್ಯ ನಿಯಂತ್ರಣ ಮಂಡಲಿ ಆಗಲೇ ಅನುಮತಿಯನ್ನು ನಿರಾಕರಿಸಬಹುದಿತ್ತು. ದೂರದಲ್ಲಿ ಉದ್ಯಮಗಳಿಗೆಂದೇ ಮೀಸಲಾದ ಸ್ಥಳಕ್ಕೆ ಕಾರ್ಖಾನೆಯನ್ನು ಒಯ್ಯಿರೆಂದು ಯಾವ ಅಧಿಕಾರಿಗಳೂ ಹೇಳಿಲ್ಲ ಯಾಕೆ? ಅದರಲ್ಲೂ ಈ ಕಂಪನಿಯ ವಿರುದ್ಧ ದಕ್ಷಿಣ ಕೊರಿಯಾದಲ್ಲೇ






ಟೆಂಪೊದಲ್ಲಿ ಆಸ್ಪತ್ರೆಗೆ ಪ್ರಜ್ಞಾಹೀನ ಜನರನ್ನು ಸಾಗಿಸುತ್ತಿರುವ ಸ್ವಯಂಸೇವಕರು